ಅನುಬಂಧ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1074, ಶ್ರೀ ಟಿ.ಬಿ. ಜಯಚಂದ್ರ, ವಿಧಾನ ಸಭಾ ಸದಸ್ಯರು.

1) ಶ್ರೀ ಬಿ. ಗಂಗಾಧರ್
ಸಹಾಯಕ (ಈಗ ಹಾಲಿ ಹಿರಿಯ ಸಹಾಯಕ)
ಕರ್ನಾಟಕ ಸರ್ಕಾರದ ಸಚಿವಾಲಯ
ಬೆಂಗಳೂರು

2) ಶ್ರೀ ಬಿ. ಕಲ್ಯಾಣ್
ಎ.ಸ.ಪಿ. (ಸಿ.ಎ.ಆರ್)
ಇವರ ಪತ್ನಿ ಶ್ರೀಮತಿ ಪ್ರೇಮಾಬಾಯಿ

3) ಶ್ರೀ ಬಿ. ಬಸವಯ್ಯ
ಅಪರ ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ
ಪತ್ನಿ ಶ್ರೀಮತಿ ತ್ರಿಪುರಾಂಬ

4) ಶ್ರೀ ಎ. ಪಾಂಡುರಂಗರಾವ್ (ದಿವಂಗತ)
ಸಾರ್ವಜನಿಕ ಸಂಪರ್ಕ ಅಧಿಕಾರಿ
ಡಿ.ಜಿ.ಮತ್ತು ಐ.ಜಿ.ಪಿ.ರವರ ಕಛೇರಿ

5) ಶ್ರೀ ಹೆಚ್.ಆರ್. ಗಿರೀಶ್
ಎರಡನೇ ದರ್ಜೆ ಸಹಾಯಕ
ಮುಖ್ಯ ಅಭಿಯಂತರವರ ಕಛೇರಿ,
ಸಣ್ಣ ನೀರಾವರಿ ಇಲಾಖೆ

ತುಂಗಭದ್ರ ಎಡದಂಡೆ ಕಾಲುವೆ ನೀರು ಪೂರೈಕೆಯಲ್ಲಿ ತೊಂದರೆ

1095 - ಶ್ರೀ ವಿರೂಪಾಕ್ಷ (ಸಿಂಧನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ಎಡದಂಡೆ ಕಾಲುವೆಯ ನೀರನ್ನು ವಿಪ್ರಿಲ್ 8ಕ್ಕೆ ಬಂದು ಮಾಡಲು ನಿಗದಿಗೊಳಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ

ಆ) ವಿಪ್ರಿಲ್ 8ಕ್ಕೆ ನೀರು ನಿಲ್ಲಿಸಿರುವುದರಿಂದ ರೈತರಿಗೆ ಅಪಾರ ಹಾನಿಯಾಗುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ರೈತರ ಹಾನಿ ತಪ್ಪಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಯವರು) :

ಅ) ಹೌದು

ಆ) ನೀರನ್ನು ಮುಂದುವರೆಸಲು ರೈತರಿಂದ ಬೇಡಿಕೆ ಇದೆ.

ಇ) ಜಲಾಶಯದಲ್ಲಿನ ನೀರಿನ ಲಭ್ಯತೇಯನ್ನು ಅನುಸರಿಸಿ ಮುಂದಿನ ಕ್ರಮದ ಬಗ್ಗೆ ಪರಿಶೀಲಿಸಲಾಗುವುದು.

ಕಾರಾಂಜಾ ನೀರಾವರಿ ಯೋಜನೆಯ ಪ್ರಗತಿ

1102 - ಶ್ರೀ ಎಲ್.ಕೆ. ಚವಾಣ್ (ಹುಲಸೂರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರಾಂಜಾ ನೀರಾವರಿ ಯೋಜನೆ ಎಂದು ಪ್ರಾರಂಭಿಸಲಾಯಿತು?

ಆ) ಈ ಯೋಜನೆಯ ಅಂದಿನ ಅಂದಾಜು ವೆಚ್ಚ ಎಷ್ಟು? ಹಾಗೂ ಈಗ ಆದರ ವೆಚ್ಚ ಎಷ್ಟು?

ಇ) ಈ ವರ್ಷ ಯೋಜನೆಗೆ ನೀಡಲಾದ ಹಣ ಎಷ್ಟು? ಹಾಗೂ ಖರ್ಚು ಮಾಡಲಾದ ವೆಚ್ಚ ಎಷ್ಟು?

ಈ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳ್ಳುವುದು.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಯವರು) :

ಅ) 1970-71ರಲ್ಲಿ

ಆ) ಯೋಜನೆಯ ಮೂಲ ಅಂದಾಜು 9.90 ಕೋಡಿ ರೂ.ಗಳು (1969-70ನೇ ದರಗಳ ಪ್ರಕಾರ) 19-3-94ನೇ ಸಾಲಿನ ದರಗಳ ಪ್ರಕಾರ 258 ಕೋಟಿ ರೂ.ಗಳು.

ಇ) ಅನಾದಾನ ರೂ. 30.00 ಕೋಡಿ ರೂ.ಗಳು ಹಾಗೂ ಪ್ರಸ್ತುತ ವರ್ಷದಲ್ಲಿ ರೂ.11.22 ಕೋಡಿ ರೂ.ಗಳನ್ನು ಖರ್ಚು ಮಾಡಲಾಗಿದೆ.

ಈ) 1997-98ರೊಳಗ್ಗಿ ಪೂರ್ಣಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಚುಳಕಿ ನಾಲಾ ನೀರಾವರಿ ಯೋಜನೆ

1101 - ಶ್ರೀ ಎಲ್.ಕೆ. ಚವಾಣ್ (ಹುಲಸೂರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚುಳ್ಕಿ ನಾಲ್ ನೀರಾವರಿ ಯೋಜನೆ ಎಂದು ಪ್ರಾರಂಭಿಸಲಾಯಿತು.

ಆ) ಈ ಯೋಜನೆಯ ಅಂದಿನ ಅಂದಾಜು ವೆಚ್ಚ ಎಷ್ಟು?

ಇ) ಈಗ ಆದರ ವೆಚ್ಚ ಎಷ್ಟು.

ಈ) ಈ ವರ್ಷ ಯೋಜನೆಗೆ ನೀಡಲಾಗುವ ಹಣ ಎಷ್ಟು

ಉ) ಈ ಯೋಜನೆಯು ಪೂರ್ಣಗೊಳ್ಳುವುದು ಯಾವಾಗ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಯವರು) :

ಅ) 1976 ರಲ್ಲಿ

ಆ) 376.76 ಲಕ್ಷ ರೂ.ಗಳು

ಇ) 3151 ಲಕ್ಷ ರೂ ಗಳು

ಈ) 4.00 ಕೋಟಿ ರೂ.ಗಳು

ಉ) 8ನೇ ಪಂಚವಾರ್ಷಿಕ ಯೋಜನೆಯ ಅಂತ್ಯಕ್ಕೆ ಪೂರ್ಣಗೊಳಿಸಲು (1996-97) ಯೋಜಿಸಲಾಗಿದೆ.